ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ – 591156
(ನ್ಯಾಕ್ ಮಾನ್ಯತೆ B+ ಗ್ರೇಡ್ – 2021)
RANI CHANNAMMA UNIVERSITY
Vidyasangama, National Highway – 04, Bhootaramanahatti, Belagavi – 591156
(NAAC Accredited with B+ Grade - 2021)
E-mail: registrar@rcub.ac.in
ಕುಲಸಚಿವರ ಕಾರ್ಯಾಲಯ
Office of the Registrar
Website: www.rcub.ac.in
Phone No.: 0831-2565256/34

ಕ್ರ.ಸಂ. : ರಾಚವಿ/ಬೆಳಗಾವಿ/ಕುಸಕಾ/ಡಿಪಿಎಆರ್/2021–22/3309/7 ದಿನಾಂಕ 11 NOV 2021

## ಕಚೇರಿ ಪತ್ರ:

**ವಿಷಯ:** ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಸರ್ಕಾರದಿಂದ ಅನುಮತಿ ಪಡೆದ 371 (ಜೆ) ಅಡಿಯ ಬೋಧಕೇತರ ಹುದ್ದೆಗಳನ್ನು ಮಾತ್ರ ಭರ್ತಿ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸಿರುವ ಕುರಿತು.

**ಉಲ್ಲೇಖ:**
1. ರಾಚವಿ ಅಧಿಸೂಚನೆ ಪತ್ರ ಸಂ: ಆರ್‌ಸಿಯು–ಡಿಪಿಎಆರ್/ನೇಮಕಾತಿ/ಹೈ–ಕ/ಇಎಸ್‌ಟಿ/2019–20/2287, ದಿನಾಂಕ: 11–09–2019
2. ರಾಚವಿ ಅಧಿಸೂಚನೆ ಪತ್ರ ಸಂ: ಆರ್‌ಸಿಯು–ಡಿಪಿಎಆರ್/ನೇಮಕಾತಿ/ಕ–ಕ/2021–22/2754 ದಿನಾಂಕ: 04–10–2021

ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಕಲ್ಯಾಣ ಕರ್ನಾಟಕ ಮೀಸಲಾತಿ (371 (ಜೆ)) ಅಡಿಯಲ್ಲಿ ಖಾಲಿ ಇರುವ ವಿವಿಧ ವೃಂದದ ಈ ಕೆಳಗಿನ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅಧಿಸೂಚನೆಯನ್ನು ಹೊರಡಿಸಲಾಗಿತ್ತು.

| ಕ್ರ. ಸಂ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ |
|---|---|---|
| 01 | ಉಪಕುಲಸಚಿವರು | 01 |
| 02 | ವೈದ್ಯಾಧಿಕಾರಿಗಳು | 01 |
| 03 | ಸಹಾಯಕ ಕುಲಸಚಿವರು | 01 |
| 04 | ಸಿಸ್ಟಂ ಅಸಿಸ್ಟಂಟ್ | 01 |
| 05 | ಎಸ್ಟೇಟ್ ಆಫೀಸರ್ | 01 |
| 06 | ಕಛೇರಿ ಅಧೀಕ್ಷಕರು | 01 |
| 07 | ನರ್ಸ್ | 01 |
| 08 | ಕಂಪೌಂಡರ್ಸ್ | 01 |
| 09 | ಫೀಲ್ಡ್ ಕೋಚೇಸ್ | 01 |
| 10 | 'ಡಿ' ಗ್ರೂಪ್ | 06 |
| | **ಒಟ್ಟು** | **15** |

ಸದರಿ 371 ಜೆ ಅಡಿ ಬೋಧಕೇತರ ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ, ಅರ್ಜಿಗಳ ಪರಿಶೀಲನಾ ಕಾರ್ಯವನ್ನು ಕೈಗೊಂಡು, ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿತ್ತು ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸಲು 15 ದಿನಗಳ ಕಾಲಾವಧಿಯನ್ನು ನೀಡಿ, ಆಕ್ಷೇಪಣೆ ಸಲ್ಲಿಸಿದ ಅಭ್ಯರ್ಥಿಗಳ ಮನವಿಯನ್ನು ಪರಿಶೀಲಿಸಿ ಆಯ್ಕೆಗೆ ಅರ್ಹರಾದ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಪ್ರಕಟಿಸಲು ಸಿದ್ಧತೆಯನ್ನು ಕೈಗೊಳ್ಳುವ ಹಂತದಲ್ಲಿಯೇ ಆರ್ಥಿಕ ಇಲಾಖೆಯ ಸುತ್ತೋಲೆ ಮತ್ತು ಘನ ಸರ್ಕಾರದಿಂದ ಈಗಾಗಲೇ ಪ್ರಾರಂಭಿಸಿರುವ ಅಥವಾ ಅಂತಿಮ ಹಂತದಲ್ಲಿರುವ ನೇರ ನೇಮಕಾತಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ಸರ್ಕಾರದ ಪತ್ರ ಸಂ: ಇಡಿ/143/ಯುಆರ್‌ಸಿ/2020, ದಿನಾಂಕ: 17–07–2020 ರನ್ವಯ ಆದೇಶಿಸಿದ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ನೇರ ನೇಮಕಾತಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಈಗಾಗಲೇ ನೇಮಕಾತಿ ಪ್ರಾರಂಭಿಸಿ ಸ್ಥಗಿತಗೊಳಿಸಿದ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ಕೋರಿ ಹಲವಾರು ಬಾರಿ ಸರ್ಕಾರಕ್ಕೆ ಪತ್ರದ ಮೂಲಕ

ವಿನಂತಿಸಿಕೊಳ್ಳಲಾಯಿತು. ವಿಶ್ವವಿದ್ಯಾಲಯದ ಮನವಿಗೆ ಸ್ಪಂದಿಸಿದ ಸರ್ಕಾರವು ಪತ್ರ ಸಂ: ಇಡಿ/143/ಯುಆರ್‌ಸಿ/2020, ದಿನಾಂಕ: 27-08-2021 ರನ್ವಯ 371 (ಜೆ) ಅಡಿ ಖಾಲಿ ಇರುವ 04 (ಉಪಕುಲಸಚಿವರು, ಸಹಾಯಕ ಕುಲಸಚಿವರು, ಎಸ್ಟೇಟ್ ಆಫೀಸರ್ ಮತ್ತು ಕಛೇರಿ ಅಧೀಕ್ಷಕರು) ಬೋಧಕೇತರ ಹುದ್ದೆಗಳಿಗೆ ಮಾತ್ರ ನೇರನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಿರುತ್ತದೆ.

ಅದರಂತೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ವೈದ್ಯಾಧಿಕಾರಿಗಳು, ಸಿಸ್ಟಮ್ ಅಸಿಸ್ಟಂಟ್, ನರ್ಸ್, ಕಂಪೌಂಡರ್, ಫೀಲ್ಡ್ ಕೋಚೀಸ್ ಮತ್ತು ಡಿ ಗ್ರೂಪ್ – ಈ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ಕೋರಿ ಈಗಾಗಲೇ ಸರ್ಕಾರಕ್ಕೆ ಪತ್ರ ಬರೆದಿರುತ್ತದೆ. ಸದರಿ ವಿಷಯವು ಸರ್ಕಾರದ ಪರಿಶೀಲನಾ ಹಂತದಲ್ಲಿದೆ. ಸರ್ಕಾರದ ಅನುಮತಿ ದೊರೆತ ತಕ್ಷಣ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು.

ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ವಿಶ್ವವಿದ್ಯಾಲಯಕ್ಕೆ ಪತ್ರ, ಇ-ಮೇಲ್ ಮತ್ತು ದೂರವಾಣಿ ಮುಖಾಂತರ ಮೇಲಿಂದ ಮೇಲೆ ಸಂಪರ್ಕಿಸುತ್ತಿರುವ ಕಾರಣ ವಿಶ್ವವಿದ್ಯಾಲಯದಿಂದ ಈ ಸ್ಪಷ್ಟೀಕರಣವನ್ನು ನೀಡಲಾಗಿದೆ.

ಕುಲಸಚಿವರು

ಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾ ಸಂಗಮ
ಬೆಳಗಾವಿ-೫೯೧೧೫೬, ಕರ್ನಾಟಕ